ಕುರಿತಾದ ಶಿಫಾರಸ್ಸುಗಳು ಆಯೋಗದ ಮೂಲಕ ಮುನ್ನಡೆಯಬೇಕಾದ ಕಾರಣ ಶೀಘ್ರಗತಿಯಲ್ಲಿ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕವನ್ನು ಪೂರ್ಣಗೊಳಿಸುವರೇ?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದಿಖಾನೆ ಸಚಿವರು):

ಅ) ಹೌದು.

ಆ) ಹೌದು.

ಇ) ಹೌದು.

ವಿಕಲಚೇತನರಿಗಾಗಿರುವ ಮೀಸಲು ಅನುದಾನದ ವಿವರಗಳು

145 (396) ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಕಲಚೇತನರಿಗೆ ಸರ್ಕಾರದ ಯಾವ ಯಾವ ಯೋಜನೆಗಳು ಅನುಷ್ಠಾನದಲ್ಲಿದೆ; ರಾಜ್ಯದಲ್ಲಿ ಎಷ್ಟು ಜನ ವಿಕಲಚೇತನರು ಯೋಜನೆಯ ಫಲಾನುಭವಿಗಳಾಗಿದ್ದಾರೆ;

ಆ) ವಿಕಲಚೇತನರ ಕಲ್ಯಾಣಕ್ಕಾಗಿ ಮೀಸಲಿಟ್ಟ ಶೇ. 3ರ ಅನುದಾನದ ಬಳಕೆಯ ಪೂರ್ಣ ಪ್ರಮಾಣದಲ್ಲಿ ಜಾರಿಗೊಳ್ಳುತ್ತಿದೆಯೇ; ಇಲ್ಲವಾದಲ್ಲಿ ಆ ಕುರಿತಾದ ಪರಿಪೂರ್ಣ ಬಳಕೆಗಾಗಿ ಸರ್ಕಾರದ ಕ್ರಮಗಳೇನು;

ಶ್ರೀ ಸಿ. ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ವಿಕಲಚೇತನರಿಗಾಗಿ ಇಲಾಖೆಯು 11 ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು ಒಟ್ಟು 8.09.448 ಅಂಗವಿಕಲರು ಯೋಜನೆಗಳ ಸೌಲಭ್ಯವನ್ನು ಪಡೆಯುತ್ತಿರುವ ವಿವರಗಳ ತಃಖ್ತೆಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಶೇಕಡ 3ರಷ್ಟು ಮೀಸಲಿರಿಸಿದ ಅನುದಾನದಲ್ಲಿ ಅಂಗವಿಕಲರಿಗೆ ಮನೆ, ವ್ಯಾಪಾರ, ವಿಶೇಷ ಮನೋರಂಜನಾ ಕೇಂದ್ರಗಳ ಸ್ಥಾಪನೆ, ವಿಶೇಷ ಶಾಲೆಗಳ ಸ್ಥಾಪನೆ, ಸಂಶೋಧನಾ ಕೇಂದ್ರಗಳ ಸ್ಥಾಪನೆ, ಅಂಗವಿಕಲ ಉದ್ಯಮಿಗಳ ಕಾರ್ಖಾನೆಗಳ ಸ್ಥಾಪನೆಗೆ ಸಂಬಂಧಿಸಿದಂತೆ

ಕಾರ್ಯೋನ್ಮುಖರಾಗಲು ಕಟ್ಟುನಿಟ್ಟಿನ ಸೂಚನೆಯನ್ನು ಸುತ್ತೋಲೆ ಮೂಲಕ ನೀಡುವಂತೆ ಸಂಬಂಧಪಟ್ಟ ಇಲಾಖೆಗಳನ್ನು ಕೋರಲಾಗಿದೆ.

ಅಂಗವಿಕಲ ಅಧಿನಿಯಮ ಕಾಯ್ದೆ 1995ರಡಿ ಹೊರಡಿಸಿದ ಅಂಗವಿಕಲರ ಅಧಿನಿಯಮ ತಿದ್ದುಪಡಿ ನಿಯಮಾವಳಿ 2006ರ ನಿಯಮ 28–ಎ ಸಂಖ್ಯೆ: ಮಮಇ 08 ಪಿ.ಹೆಚ್.ಪಿ 2006. ದಿನಾಂಕ:09–11–2006 ರಲ್ಲಿ ಕಲ್ಪಿಸಿರುವ ಅವಕಾಶದಂತೆ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ಅಭಿವೃದ್ಧಿ ಯೋಜನೆಗಳ ಅನುದಾನದಲ್ಲಿ ಶೇಕಡ 3ರಷ್ಟು ಅನುದಾನವನ್ನು ಮೀಸಲಿರಿಸುವ ಆಯವ್ಯಯವನ್ನು ಸಂಪೂರ್ಣವಾಗಿ ಬಳಸುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಸಭೆ ಕರೆಯಲಾಗುತ್ತಿದೆ.

ಅನುಬಂಧ

ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಜಿಲ್ಲಾವಾರು ವಿವರ

ಕ್ರ ಸಂ	ಜಿಲ್ಲೆಗಳ ಹೆಸರು	ಆಧಾರ	ವಿದ್ಯಾರ್ಥಿ ನಿಲಯ	ಸಾಧನ ಸಲಕರಣೆ	ಸಾಧನೆ ಪ್ರತಿಭೆ	ವೈದ್ಯಕೀಯ ಪರಿಹಾರ ನಿಧಿ	ಗ್ರಾಮೀಣ ಪುನರ್ವಸತಿ ಯೋಜನೆ	ವಿಶೇಷ ಶಾಲೆಗಳು	ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯ	ರಿಯಾಯಿತಿ ದರದ ಬಸ್ ಪಾಸ್	ಮಾಸಿಕ ಪೋಷಣಾ ಭತ್ಯೆ	ಬುದ್ಧಿಮಾಂದ್ಯದ ಪೋಷಕರಿಗೆ ವಿಮಾ ಸೌಲಭ್ಯ
1	2	3	4	5	6	7	8	9	10	11	12	13
1	ಬೆಂಗಳೂರು(ನ)	04	125	914	70	10	35	450	50	7000	31877	89
2	ಬೆಂಗಳೂರು(ಗ್ರಾ	04	125	705	–	–	60	50	50	4000	8786	122
3	ಬೆಳಗಾಂ	04	120	713	–	01	39 4	100	50	6100	68003	363
4	ಬೀದರ್	04	103	697	–	03	190	–	50	2500	21677	53
5	ಬಾಗಲಕೋಟೆ	04	87	658	01	–	150	–	50	4750	28332	47
6	ಬಳ್ಳಾರಿ	06	95	767	–	–	153	–	50	3350	24352	255
7	ಬಿಜಾಪುರ	06	119	661	–	–	200	50	50	3500	39169	80
8	ಚಿಕ್ಕಮಗಳೂರು	04	67	642	–	–	80	50	50	1903	11004	136
9	ಚಿತ್ರದುರ್ಗ	06	117	664	–	01	163	–	50	1250	23590	357
10	ಚಾಮರಾಜನಗರ	04	69	635	–	–	116	–	50	2000	14866	43
11	ಧಾರವಾಡ	06	80	662	15	02	132	100	50	6000	22261	65
12	ದಾವಣಗೆರೆ	06	75	743	–	03	238	50	50	2500	23788	137
13	ಹಾವೇರಿ	04	74	665	–	–	188	50	50	3500	30236	104
14	ದಕ್ಷಿಣ ಕನ್ನಡ	04	68	639	–	–	49	100	–	600	14590	129

15	ಗುಲ್ಬರ್ಗಾ	04	76	730	–	–	247	–	50	4000	30356	105
16	ಗದಗ	06	68	642	01	–	47	–	50	4250	21228	103
17	ಹಾಸನ	04	110	738	04	–	131	50	50	3297	23682	156
18	ಮೈಸೂರು	04	115	897	02	01	174	50	50	6000	31037	237
19	ಕೊಡಗು	04	60	331	–	–	21	–	–	500	4223	23
20	ಕೋಲಾರ	04	63	679	03	01	134	–	50	3515	14548	120
21	ಕೊಪ್ಪಳ	04	68	634	–		127	50	50	2500	19170	56
22	ತುಮಕೂರು	10	105	837	04	–	310	150	50	2500	39747	105
23	ಉತ್ತರಕನ್ನಡ	04	87	690	–	–	453	–	50	2500	13329	122
24	ಉಡುಪಿ	04	84	295	–	–	85	–	–	200	10602	59
25	ಶಿವಮೊಗ್ಗ	08	85	670	–	–	230	200	50	1800	18892	97
26	ಮಂಡ್ಯ	08	95	660	07	01	190	–	50	5500	30447	169
27	ರಾಯಚೂರು	04	73	658	–	–	25	–	–	5000	16582	6
28	ರಾಮನಗರ	04	78	644	–	03	80	–	–	2800	15943	–
29	ಚಿಕ್ಕಬಳ್ಳಾಪುರ	04	69	653	–	–	65	–	–	4685	14477	10
30	ಯಾದಗಿರಿ	–	–	–	–	–	–	–	–	2000	9881	–
	ಒಟ್ಟು	142	2560	19517	107	26	4477	1500	1150	100000	676621	3348